2018 ಕ.ತೀ.ವ 1744

## ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ

## ಶ್ರೀ ವೈ.ಬಿ. ಶಿವ ರೆಡ್ಡಿ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ, (ನಗರಾಭಿವೃದ್ಧಿ ಇಲಾಖೆ) ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಲ್ಲಿನ ರಿಟ್ ಅರ್ಜಿ.

ಮಾಗಡಿ ಅಭಿವೃದ್ಧಿ ಪ್ರಾಧಿಕಾರ, ರಾಮನಗರ ಜಿಲ್ಲೆ ಇವರು, ಸದರಿ ಪ್ರಾಧಿಕಾರವು ಅನುಮೋದಿಸಿದ ಮತ್ತು ಮಂಜೂರು ಮಾಡಿದ ವಾಸದ ಬಡಾವಣೆಯಲ್ಲಿ ನಾಗರಿಕ ಸೌಲಭ್ಯ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಆರೋಪಿಸಲಾದ ವಿಳಂಬಕ್ಕಾಗಿ; ನಿವೇಶನದ ಮಾರ್ಗದರ್ಶಿ ಮೌಲ್ಯದ ಶೇಕಡ 2 ರಷ್ಟನ್ನು ದಂಡದ ಮೊತ್ತವಾಗಿ, ವಾರ್ಷಿಕ ಶೇಕಡ 2 ರ ದರದಲ್ಲಿ ಐದು ವರ್ಷಗಳ ಅವಧಿ ಮೀರಿ ಅರ್ಜಿದಾರರಿಗೆ ನೀಡಬೇಕೆಂದು ಕೋರಿಕೆ ಇಟ್ಟಿದ್ದಾರೆಂಬುದು ಅರ್ಜಿದಾರರ ವಾದವಾಗಿದೆ.

ಅಂಥ ವಿಳಂಬದ ಸಂದರ್ಭಗಳಲ್ಲಿ ದಂಡವಾಗಿ ನಿವೇಶನದ ಮಾರ್ಗದರ್ಶಿ ಮೌಲ್ಯದ ಶೇಕಡ 2 ರಷ್ಟರ ಅಂಥ ಲೆವಿಯನ್ನು ವಿಧಿಸಲು ಅಧಿಕಾರ ನೀಡುವ ಯಾವುದೇ ನಿರ್ದಿಷ್ಟ ಉಪಬಂಧ ಅಥವಾ ಅಧಿಸೂಚನೆ ಇಲ್ಲವೆಂದು ಹಾಗೂ ವಾಸ್ತವಾಂಶಗಳನ್ನಾಧರಿಸಿದಾಗ್ಯೂ, ದಿನಾಂಕ 24.08.2010ರಂದು ಬಡಾವಣೆ ನಕ್ಷೆ ಮಂಜೂರು ಮಾಡುವ ಅನುಮೋದನೆಯ ದಿನಾಂಕದಿಂದ ಐದು ವರ್ಷಗಳ ಒಳಗಾಗಿ ಹಣ ಸಂದಾಯ ಮಾಡಿದಾಗ್ಯೂ ಮತ್ತು ವಾಸದ ಬಡಾವಣೆಯನ್ನು ರೂಪಿಸಿದಾಗ್ಯೂ, ಸಕಾಲದಲ್ಲಿ ಬೆಸ್ಕಾಂ ಪ್ರಾಧಿಕಾರಿಗಳು ವಿದ್ಯುಚ್ಛಕ್ತಿ ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡದಿರುವ ಕಾರಣದಿಂದ, ನಾಗರಿಕ ಸೌಲಭ್ಯ ಪ್ರದೇಶವನ್ನು ಅಭಿವೃದ್ಧಿ ಪಡಿಸುವಲ್ಲಿ ಅಂಥ ವಿಳಂಬ ಉಂಟಾಯಿತು ಎಂದು ಪ್ರತ್ಯರ್ಜಿದಾರ ಸಂ.3 – ಪ್ರಾಧಿಕಾರಕ್ಕೆ ಸಾಕಷ್ಟು ರೀತಿಯಲ್ಲಿ ವಿಳಂಬಕ್ಕೆ ಕಾರಣವನ್ನು ವಿವರಿಸಲಾಗಿದೆ ಎಂದೂ ಸಹ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರತಿಪಾದಿಸಿದ್ದಾರೆ.

*ರಿಟ್ ಅರ್ಜಿ ಸಂಖ್ಯೆ.: 12468–12472/2017 ಮತ್ತು ಇತರೆ, ದಿನಾಂಕ 4ನೇ ಜುಲೈ, 2017.

**ಪಕ್ಷಕಾರರ ಪರ ವಾದಿಸಿದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ನಂತರ, ಸದರಿ ಪತ್ರವು, ರಾಜ್ಯ ಸರ್ಕಾರವು ಅಧೀನ ಶಾಸನದ ಸ್ವರೂಪದಲ್ಲಿ ಇಲ್ಲವೆಂದು ಮತ್ತು ಅದು ಕೇವಲ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇವರು, ಮಹಾನಗರ ಆಯುಕ್ತರು (ಮೆಟ್ರೋಪಾಲಿಟನ್ ಕಮೀಷನರ್), ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಬರೆದ ಪತ್ರವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.**

**ಆದುದರಿಂದ, ಇದರ ಆಧಾರದ ಮೇಲೆ, ಪ್ರತ್ಯರ್ಜಿದಾರ ಸಂಖ್ಯೆ 3 – ಪ್ರಾಧಿಕಾರ ಇವರು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ 76–ಕೆ ಪ್ರಕರಣದ ಉಪಬಂಧಗಳ ಮೇರೆಗೆ ಮಾರ್ಗದರ್ಶಿ ಮೌಲ್ಯದ ಶೇಕಡ 2ರ ದರದಲ್ಲಿ ದಂಡವನ್ನು ವಿಧಿಸಲು ಸಾಧ್ಯವಿಲ್ಲ. ಪ್ರತ್ಯರ್ಜಿದಾರ ಸಂಖ್ಯೆ 3 ಇವರು ಯಾವುದೇ ಶಾಸನಾತ್ಮಕ ಸಕ್ಷಮತೆಯನ್ನು ಹೊಂದಿರುವುದಿಲ್ಲ. ಅಧಿನಿಯಮದ 76–ಕೆ ಪ್ರಕರಣದ ಸದರಿ ಉಪಬಂಧಗಳ ಮೇರೆಗೆ ರಾಜ್ಯ ಸರ್ಕಾರವು ಸ್ವತಃ ಸೂಕ್ತ ಅಧಿಸೂಚನೆಯನ್ನು ಹೊರಡಿಸಿದ ಹೊರತು, ಸ್ಥಳೀಯ ಪ್ರಾಧಿಕಾರಗಳು ಅಂಥ ದಂಡವನ್ನು ವಿಧಿಸಲು ಸಾಧ್ಯವಿಲ್ಲ. ಆಕ್ಷೇಪಿತ ಪತ್ರವಾದ ಅನುಬಂಧ – ಸಿ ಇದರ ಮೂಲವೇ ರಾಜ್ಯ ಸರ್ಕಾರದ ಯಾವುದೇ ಶಾಸನಾತ್ಮಕ ಕ್ರಮದಿಂದ ಪತ್ತೆಯಾಗದಿರುವುದರಿಂದ, ಪ್ರಶ್ನಿತ ಪತ್ರವು ಅಧಿಕಾರ ವ್ಯಾಪ್ತಿ ಇಲ್ಲದ್ದೆಂದು ಕಂಡು ಬಂದಿದೆ. ಅದು ರದ್ದಿಯಾತಿಗೆ ಒಳಪಡುತ್ತದೆ.**

ಅರ್ಜಿದಾರರುಗಳ ಪರ: ಶ್ರೀ ಬಿ.ಕೆ. ಚಂದ್ರಶೇಖರ್, ವಕೀಲರು.
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಎ.ಕೆ. ವಸಂತ್, ಸಹಾಯಕ ಸರ್ಕಾರಿ ವಕೀಲರು ಮತ್ತು 2 ಮತ್ತು 3ನೇ ಪ್ರತ್ಯರ್ಜಿದಾರರ ಪರ ಶ್ರೀ ಎಸ್.ಜಿ. ಪಂಡಿತ್, ಸಹಾಯಕ ಸರ್ಕಾರಿ ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ:**

1. ಪ್ರಸ್ತುತ ರಿಟ್ ಅರ್ಜಿಗಳನ್ನು ಈ ಮುಂದಿನ ಮನವಿಗಳನ್ನು ಸಲ್ಲಿಸಿ ದಾಖಲಿಸಲಾಗಿದೆ:

*"(ಎ) ಪರಮಾದೇಶ (ಮ್ಯಾಂಡಮಸ್) ಅಥವಾ ಯಾವುದೇ ಇತರ ಸೂಕ್ತ ರಿಟ್ ಸ್ವರೂಪದಲ್ಲಿ ರಿಟ್ ನೀಡುವ ಮೂಲಕ ಅನುಬಂಧ–ಎ ಮೇರೆಗೆ ಹಾಜರುಪಡಿಸಿದ ದಿನಾಂಕ 29.02.2017ರ ಕಾನೂನು ನೋಟೀಸಿನ ಅನುಸರಣೆಯಲ್ಲಿ ಬೇಡಿಕೆ ಇಟ್ಟಂತೆ ಅರ್ಜಿದಾರರ ಕ್ಲೇಮುಗಳನ್ನು ಪರಿಗಣಿಸಲು ಮೂರನೇ ಪ್ರತ್ಯರ್ಜಿದಾರ ಪ್ರಾಧಿಕಾರಗಳಿಗೆ ನಿರ್ದೇಶಿಸುವುದು;*

*(ಬಿ) ಸರ್ಷಿಯೋರರಿ ಅಥವಾ ಯಾವುದೇ ಇತರ ಸೂಕ್ತ ರಿಟ್ ಸ್ವರೂಪದಲ್ಲಿ ರಿಟ್ ನೀಡುವ ಮೂಲಕ, 17,41,181/– ರೂ.ಗಳ ಮೊತ್ತವನ್ನು ದಂಡವನ್ನಾಗಿ ಕೇಳಿರುವಷ್ಟರ ಮಟ್ಟಿಗೆ ಅನುಬಂಧ–'ಬಿ' ಮೇರೆಗೆ ಹಾಜರುಪಡಿಸಿದ ಸಂಖ್ಯೆ: ಯುಡಿಡಿ 239 ಬಿಎಂಆರ್ 2012 ರಲ್ಲಿ ದಿನಾಂಕ 27.09.2014ರಂದು ಮೊದಲ ಪ್ರತ್ಯರ್ಜಿದಾರರು ನೀಡಿದ ಅನುಬಂಧ–'ಸಿ' ಮೇರೆಗೆ ಹಾಜರುಪಡಿಸಿದ ಪ್ರಶ್ನಿತ ಪತ್ರವನ್ನು ರದ್ದುಗೊಳಿಸುವುದು ಹಾಗೂ ಅನುಬಂಧ–'ಬಿ' ಮೇರೆಗೆ ಹಾಜರುಪಡಿಸಿದ ಸಂಖ್ಯೆ ಎಂಪಿಎ/ ಎಲ್ಎಒ/24/2009–10/921 ರಲ್ಲಿ ಮೂರನೆ ಪ್ರತ್ಯರ್ಜಿದಾರರು ನೀಡಿದ ದಿನಾಂಕ 10.01.2017ರ ನೋಟೀಸನ್ನು ಸಹ ರದ್ದುಗೊಳಿಸುವುದು;*

*(ಸಿ) ನ್ಯಾಯ ಮತ್ತು ಸಮ ನ್ಯಾಯದ ಹಿತದೃಷ್ಟಿಯಿಂದ, ಈ ಮೊಕದ್ದಮೆಯ ವಾಸ್ತವಾಂಶಗಳು ಮತ್ತು ಸಂದರ್ಭಗಳ ಮೇರೆಗೆ, ಈ ಮಾನ್ಯ ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದಂಥ ಇತರ ಸೂಕ್ತ ಪರಿಹಾರ/ಗಳು, ರಿಟ್/ಗಳು, ನಿರ್ದೇಶನ/ಗಳನ್ನು ವೆಚ್ಚ ಸಹಿತವಾಗಿ ನೀಡುವುದು".*

2. ಶ್ರೀ ಎನ್. ಗೋಪಾಲಯ್ಯ, ಸರ್ಕಾರದ ಅಧೀನ ಕಾರ್ಯದರ್ಶಿ ಇವರು ನೀಡಿದ ಪತ್ರ ಅನುಬಂಧ – ಸಿ, ದಿನಾಂಕ 27.09.2014ರ ಆಧಾರದ ಮೇಲೆ, ಪ್ರತ್ಯರ್ಜಿದಾರ ಸಂಖ್ಯೆ 3 ಮಾಗಡಿ ಅಭಿವೃದ್ಧಿ ಪ್ರಾಧಿಕಾರ, ರಾಮನಗರ ಜಿಲ್ಲೆ ಇವರು, ಸದರಿ ಪ್ರಾಧಿಕಾರವು ಅನುಮೋದಿಸಿದ ಮತ್ತು ಮಂಜೂರು ಮಾಡಿದ ವಾಸದ ಬಡಾವಣೆಯಲ್ಲಿ ನಾಗರಿಕ ಸೌಲಭ್ಯ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಆರೋಪಿಸಲಾದ ವಿಳಂಬಕ್ಕಾಗಿ; ನಿವೇಶನದ ಮಾರ್ಗದರ್ಶಿ ಮೌಲ್ಯದ ಶೇಕಡ 2 ರಷ್ಟನ್ನು ದಂಡದ ಮೊತ್ತವಾಗಿ, ವಾರ್ಷಿಕ ಶೇಕಡ 2 ರ ದರದಲ್ಲಿ ಐದು ವರ್ಷಗಳ ಅವಧಿ ಮೀರಿ ಅರ್ಜಿದಾರರಿಗೆ ನೀಡಬೇಕೆಂದು ಕೋರಿಕೆ ಇಟ್ಟಿದ್ದಾರೆಂಬುದರ ಕಡೆ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಗಮನ ಸೆಳೆದಿದ್ದಾರೆ.

3. ಅಂಥ ವಿಳಂಬದ ಸಂದರ್ಭಗಳಲ್ಲಿ ದಂಡವಾಗಿ ನಿವೇಶನದ ಮಾರ್ಗದರ್ಶಿ ಮೌಲ್ಯದ ಶೇಕಡ 2 ರಷ್ಟರ ಅಂಥ ಲೆವಿಯನ್ನು ವಿಧಿಸಲು ಅಧಿಕಾರ ನೀಡುವ ಯಾವುದೇ ನಿರ್ದಿಷ್ಟ ಉಪಬಂಧ ಅಥವಾ ಅಧಿಸೂಚನೆ ಇಲ್ಲವೆಂದು ಹಾಗೂ ವಾಸ್ತವಾಂಶಗಳನ್ನಾಧರಿಸಿದಾಗ್ಯೂ, ದಿನಾಂಕ 24.08.2010ರಂದು ಬಡಾವಣೆ ನಕ್ಷೆ ಮಂಜೂರು ಮಾಡುವ ಅನುಮೋದನೆಯ ದಿನಾಂಕದಿಂದ ಐದು ವರ್ಷಗಳ ಒಳಗಾಗಿ ಹಣ ಸಂದಾಯ ಮಾಡಿದಾಗ್ಯೂ ಮತ್ತು ವಾಸದ ಬಡಾವಣೆಯನ್ನು ರೂಪಿಸಿದಾಗ್ಯೂ, ಸಕಾಲದಲ್ಲಿ ಬೆಸ್ಕಾಂ ಪ್ರಾಧಿಕಾರಿಗಳು ವಿದ್ಯುಚ್ಛಕ್ತಿ ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡದಿರುವ ಕಾರಣದಿಂದ, ನಾಗರಿಕ ಸೌಲಭ್ಯ ಪ್ರದೇಶವನ್ನು ಅಭಿವೃದ್ಧಿಪಡಿಸುವಲ್ಲಿ ಅಂಥ ವಿಳಂಬ ಉಂಟಾಯಿತು ಎಂದು ಪ್ರತ್ಯರ್ಜಿದಾರ ಸಂ.3 ಪ್ರಾಧಿಕಾರಕ್ಕೆ ಸಾಕಷ್ಟು ರೀತಿಯಲ್ಲಿ ವಿಳಂಬಕ್ಕೆ ಕಾರಣವನ್ನು ವಿವರಿಸಲಾಗಿದೆ ಎಂದೂ ಸಹ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರತಿಪಾದಿಸಿದ್ದಾರೆ.

4. ಪ್ರತ್ಯುತ್ತರವಾಗಿ, ಪ್ರತ್ಯರ್ಜಿದಾರ ಸಂಖ್ಯೆ 3 ಮಾಗಡಿ ಅಭಿವೃದ್ಧಿ ಪ್ರಾಧಿಕಾರ ಇವರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಈ ಕೆಳಗೆ ಪರಾಮರ್ಶನೆಗಾಗಿ ಉಲ್ಲೇಖಿಸಿರುವ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ,

1961ರ (ಸಂಕ್ಷಿಪ್ತವಾಗಿ 'ಅಧಿನಿಯಮ') 76-ಕೆ ಪ್ರಕರಣದ ಉಪಬಂಧಗಳನ್ನು ಅವಲಂಬಿಸಿದ್ದಾರೆ, ಎಂದರೆ:

> 76-ಕೆ. ರಾಜ್ಯ ಸರ್ಕಾರದ ನಿಯಂತ್ರಣ:- *(1) ಪ್ರತಿಯೊಂದು ಯೋಜನಾ ಪ್ರಾಧಿಕಾರವು, ರಾಜ್ಯ ಸರ್ಕಾರವು ಈ ಅಧಿನಿಯಮದ ದಕ್ಷ ಅಡಳಿತಕ್ಕಾಗಿ ಕಾಲಕಾಲಕ್ಕೆ ಹೊರಡಿಸಬಹುದಾದಂಥ ನಿರ್ದೇಶನಗಳನ್ನು ಕಾರ್ಯಗತಗೊಳಿಸತಕ್ಕದ್ದು.*
>
> *(2) ಯಾವುದೇ ಯೋಜನಾ ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಅದರ ಅಧಿಕಾರಗಳ ಚಲಾಯಿಸುವಿಕೆ ಮತ್ತು ಅದರ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ, ಆ ಯೋಜನಾ ಪ್ರಾಧಿಕಾರ ಮತ್ತು ಸ್ಥಳೀಯ ಪ್ರಾಧಿಕಾರದ ನಡುವೆ ಯಾವುದೇ ವಿವಾದವು ಉದ್ಭವಿಸಿದರೆ, ಅಂಥ ವಿವಾದದ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.*

5. ಮುಂದುವರಿದು, ಪ್ರತ್ಯರ್ಜಿದಾರ ಸಂಖ್ಯೆ 3 ಪ್ರಾಧಿಕಾರ ಇವರ ಪರ ನ್ಯಾಯವಾದಿಗಳು, ಈ ಅಧಿನಿಯಮದ ದಕ್ಷ ಆಡಳಿತಕ್ಕಾಗಿ ಹೊರಡಿಸಿದ ರಾಜ್ಯ ಸರ್ಕಾರದ ನಿರ್ದೇಶನಗಳಿಗೆ ಬಿಲ್ಡರ್‌ಗಳು (ಅರ್ಜಿದಾರರು) ಬದ್ಧರಾಗಿದ್ದಾರೆ ಹಾಗೂ ಅನುಬಂಧ-ಸಿ ಯಲ್ಲಿರುವ ಸದರಿ ಪತ್ರವು ಅಧಿನಿಯಮದ ಸದರಿ ಉಪಬಂಧಗಳಿಂದ ಅದರ ಅಧಿಕಾರಗಳನ್ನು ಪಡೆದಿದೆ ಎಂದು ಪ್ರತಿಪಾದಿಸಿದ್ದಾರೆ.

6. ಪಕ್ಷಕಾರರ ಪರ ವಾದಿಸಿದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ನಂತರ, ಸದರಿ ಪತ್ರವು, ರಾಜ್ಯ ಸರ್ಕಾರವು ಅಧೀನ ಶಾಸನದ ಸ್ವರೂಪದಲ್ಲಿ ಇಲ್ಲವೆಂದು ಮತ್ತು ಅದು ಕೇವಲ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇವರು, ಮಹಾನಗರ ಆಯುಕ್ತರು (ಮೆಟ್ರೋಪಾಲಿಟನ್ ಕಮೀಷನರ್), ಬೆಂಗಳೂರು

ಮಹಾ ನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಬರೆದ ಪತ್ರವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.

7. ಆದುದರಿಂದ, ಇದರ ಆಧಾರದ ಮೇಲೆ, ಪ್ರತ್ಯರ್ಜಿದಾರ ಸಂಖ್ಯೆ 3 – ಪ್ರಾಧಿಕಾರ ಇವರು, ಅಧಿನಿಯಮದ 76–ಕೆ ಪ್ರಕರಣದ ಉಪಬಂಧಗಳ ಮೇರೆಗೆ ಮಾರ್ಗದರ್ಶಿ ಮೌಲ್ಯದ ಶೇಕಡ 2ರ ದರದಲ್ಲಿ ದಂಡವನ್ನು ವಿಧಿಸಲು ಸಾಧ್ಯವಿಲ್ಲ. ಪ್ರತ್ಯರ್ಜಿದಾರ ಸಂಖ್ಯೆ 3 ಇವರು ಯಾವುದೇ ಶಾಸನಾತ್ಮಕ ಸಕ್ಷಮತೆಯನ್ನು ಹೊಂದಿರುವುದಿಲ್ಲ. ಅಧಿನಿಯಮದ 76–ಕೆ ಪ್ರಕರಣದ ಸದರಿ ಉಪಬಂಧಗಳ ಮೇರೆಗೆ ರಾಜ್ಯ ಸರ್ಕಾರವು ಸ್ವತಃ ಸೂಕ್ತ ಅಧಿಸೂಚನೆಯನ್ನು ಹೊರಡಿಸಿದ ಹೊರತು, ಸ್ಥಳೀಯ ಪ್ರಾಧಿಕಾರಗಳು ಅಂಥ ದಂಡವನ್ನು ವಿಧಿಸಲು ಸಾಧ್ಯವಿಲ್ಲ. ಆಕ್ಷೇಪಿತ ಪತ್ರವಾದ ಅನುಬಂಧ – ಸಿ ಇದರ ಮೂಲವೇ ರಾಜ್ಯ ಸರ್ಕಾರದ ಯಾವುದೇ ಶಾಸನಾತ್ಮಕ ಕ್ರಮದಿಂದ ಪತ್ತೆಯಾಗದಿರುವುದರಿಂದ, ಪ್ರಶ್ನಿತ ಪತ್ರವು ಅಧಿಕಾರ ವ್ಯಾಪ್ತಿ ಇಲ್ಲದ್ದೆಂದು ಕಂಡು ಬಂದಿದೆ. ಅದು ರದ್ದಿಯಾತಿಗೆ ಒಳಪಡುತ್ತದೆ.

8. ಪ್ರಸ್ತುತ ಮೊಕದ್ದಮೆಯ ವಾಸ್ತವಾಂಶಗಳ ಪ್ರಕಾರ ತೀರ್ಮಾನಿಸುವುದು ಅವಶ್ಯವಿಲ್ಲವೆಂದು ಈ ನ್ಯಾಯಾಲಯಕ್ಕೆ ಕಂಡು ಬಂದಿರುವುದರಿಂದ ಮತ್ತು ಈ ಸಂಬಂಧದಲ್ಲಿ ಸೂಕ್ತ ಅಧಿಸೂಚನೆಯನ್ನು ಹೊರಡಿಸುವುದರ ಮೇರೆಗೆ, ಈ ನ್ಯಾಯಾಲಯವು ಯಾವುದೇ ತೀರ್ಮಾನಕ್ಕೆ ಬಂದಿರುವುದಿಲ್ಲ, ಪ್ರತ್ಯರ್ಜಿದಾರ ಸಂಖ್ಯೆ 3–ಪ್ರಾಧಿಕಾರ ಇವರು, ಪ್ರಸ್ತುತ ಮೊಕದ್ದಮೆಯಲ್ಲಿ ಹೊಸದಾದ ಕ್ರಮವನ್ನು ಕೈಗೊಳ್ಳುವುದು ಸೂಕ್ತವೆಂದು ಅದಕ್ಕೆ ಕಂಡು ಬಂದರೆ ಹಾಗೆ ಕೈಗೊಳ್ಳಬಹುದು.

9. ಈ ಅಭಿಪ್ರಾಯಗಳೊಂದಿಗೆ ರಿಟ್ ಅರ್ಜಿಗಳನ್ನು **ಅನುಮತಿ**ಸಲಾಗಿದ್ದು, ದಿನಾಂಕ 27.09.2014ರ ಪ್ರಶ್ನಿತ ಪತ್ರವಾದ ಅನುಬಂಧ–ಸಿ ಯನ್ನು ರದ್ದುಗೊಳಿಸಲಾಗಿದೆ. ತತ್ಪರಿಣಾಮವಾಗಿ, ಪ್ರತ್ಯರ್ಜಿದಾರ ಸಂಖ್ಯೆ 3 ಮಾಗಡಿ ಅಭಿವೃದ್ಧಿ ಪ್ರಾಧಿಕಾರ, ರಾಮನಗರ ಜಿಲ್ಲೆ ಇವರು ಮಾರ್ಗದರ್ಶಿ ಮೌಲ್ಯದ ಶೇಕಡ 2 ರಷ್ಟು ದಂಡವನ್ನು ವಿಧಿಸಿ ಅರ್ಜಿದಾರರನ್ನುದ್ದೇಶಿಸಿ ದಿನಾಂಕ 10.01.2017ರ

ಅನುಬಂಧ–ಬಿ ಯಲ್ಲಿ ಹೊರಡಿಸಿದ ನೋಟೀಸು ಸಹ ರದ್ದಿಯಾತಿಗೆ ಒಳಪಡುತ್ತವೆ. ತದನುಸಾರವಾಗಿ ಅವನ್ನು ರದ್ದುಗೊಳಿಸಲಾಗಿದೆ. ಯಾವುವೇ ವೆಚ್ಚಗಳಿಲ್ಲ.

ಈ ಆಜ್ಞೆಯ ಪ್ರತಿಯನ್ನು ಮಾಹಿತಿ ಮತ್ತು ಅವಶ್ಯಕ ಕ್ರಮಕೈಗೊಳ್ಳುವುದಕ್ಕಾಗಿ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ಕಾನೂನು ಕಾರ್ಯದರ್ಶಿಗಳಿಗೆ ಕಳುಹಿಸಲು ನಿರ್ದೇಶಿಸಲಾಗಿದೆ.